ಆ) ನವ ಮಂಗಳೂರು ಬಂದರು ಪ್ರಾಧಿಕಾರದವರು ಇಲ್ಲಿ ಮೀನುಗಾರಿಕಾ ಬಂದರು ನಿರ್ಮಾಣದ ಬಗ್ಗೆ ಸಾಧಕ - ಭಾಧಕಗಳನ್ನು ಪರಿಶೀಲಿಸುತ್ತಿದ್ದು ಇದಕ್ಕೆ ಬೇಕಾಗಿರುವ ಮಾಹಿತಿಗಳನ್ನು ಒದಗಿಸಲಾಗಿದೆ.

ಇ) ಸಂತ್ರಸ್ಥ ಮೀನುಗಾರರಿಗೆ ಮಂಗಳೂರು ಹಳೆ ಬಂದರಿನಲ್ಲಿ ಒಂದು ಪ್ರತ್ಯೇಕ ಸಣ್ಣ ಮೀನುಗಾರಿಕಾ ಬಂದರನ್ನು ನಿರ್ಮಿಸಲಾಗಿದೆ.

ನಾಗರಹೊಳೆ ಅರಣ್ಯದಲ್ಲಿ ಬೆಂಕಿ ಅಪಘಾತ ಸಂಭವಿಸಿರುವುದು

520 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆ ಅಭಯಾರಣ್ಯ ಪ್ರದೇಶದಲ್ಲಿ ಆಗಾಗ್ಗೆ ಬೆಂಕಿ ಅನಾಹುತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇತ್ತೀಚೆಗೆ ಆ ರೀತಿ ಸಂಭವಿಸಿದ ಪ್ರಕರಣಗಳು ಯಾವುವು?

ಇ) ಈ ಅನಾಹುತಗಳು ನಡೆಯಲು ವಿಶೇಷ ಕಾರಣಗಳೇನಾದರೂ ಇವೆಯೇ?

ಈ) ಅವುಗಳನ್ನು ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಬಂದಿದೆ.

ಆ) ಬೆಂಕಿ ಅನಾಹುತ ಈ ಕೆಳಗೆ ತಿಳಿಸಿದ ಅರಣ್ಯ ಪ್ರದೇಶಗಳಲ್ಲಿ ಆಗಿರುತ್ತದೆ.

1) ನಾಗರಹೊಳೆ ರಾಷ್ಟ್ರೀಯ ಉದ್ಯಾನವನ

2) ಬಂಡೀಪುರ ರಾಷ್ಟ್ರೀಯ ಉದ್ಯಾನವನ

3) ಭದ್ರಾ ಅಭಯಾರಣ್ಯ

4) ಶೆಟ್ಟಿಹಳ್ಳಿ ಅಭಯಾರಣ್ಯ

5) ಬಿಳಿಗಿರಿರಂಗಸ್ವಾಮಿ ದೇವಸ್ಥಾನ ಅಭಯಾರಣ್ಯ

ಇ) ಹೌದು

ಈ) ಕಾಡಿಗೆ ಬೆಂಕಿ ಬೀಳುವುದನ್ನು ತಡೆಗಟ್ಟಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಕಿ ನಿರೋಧಕ ವಾಹನಗಳ ನೇಮಕ, ಬೆಂಕಿ, ಲೈನುಗಳನ್ನು ಎಳೆಯುವುದು, ಬೆಂಕಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಹಾಲಿನ ಡೈರಿಯಲ್ಲಿ ನಷ್ಟ

549 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಮದರ್ ಡೈರಿಯು ಸೇರಿದಂತೆ ಯಾವ ಯಾವ ಜಿಲ್ಲಾ ಹಾಲು ಒಕ್ಕೂಟಗಳು ನಷ್ಟವನ್ನು ಅನುಭವಿಸುತ್ತಿವೆ?

ಆ) ಯಾವ ಯಾವ ವರ್ಷಗಳಿಂದ ಎಷ್ಟೆಷ್ಟು ಪ್ರಮಾಣದ ನಷ್ಟವನ್ನು ವಿವಿಧ ಜಿಲ್ಲಾ ಹಾಲು ಒಕ್ಕೂಟಗಳು ಅನುಭವಿಸುತ್ತಿವೆ. (ಮದರ್ ಡೈರಿಯೂ ಸೇರಿದಂತೆ)